**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕ 15-07-2021**

**ಮುಂದುವರೆದ ಪಾಟೀ ಸವಾಲು - ಶ್ರೀ. ಕೆ.ಎಸ್., ವಕೀಲರಿಂದ**

4) ನನ್ನ ತಂದೆ ತೀರಿಕೊಂಡು ಎಷ್ಟು ವರ್ಷಗಳಾದವು ಎಂದರೆ 5-6 ವರ್ಷಗಳು ಆಗಿರಬಹುದು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಸದರಿ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆಯೇ? ಎಂದರೆ ಎಲ್ಲವೂ ಸತ್ಯ, ಆದರೆ ಅದರಲ್ಲಿ ಒಂದು ಪಾಯಿಂಟ್ ಸರಿ ಇಲ್ಲ. ಸಾಕ್ಷಿಗೆ ನಿಮ್ಮ ಪ್ರಮಾಣ ಪತ್ರದ ಯಾವ ಪಾಯಿಂಟ್ ಸರಿ ಇಲ್ಲ ಎಂಬುದನ್ನು ವಿವರಿಸಿ ಎಂದು ಕೇಳಿದರೆ ಸಾಕ್ಷಿಯು ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿನಲ್ಲಿ ಕೇಳಿದ ಪ್ರಶ್ನೆಗಳಲ್ಲಿ ಇರುವ ಪಾಯಿಂಟ್ ಸರಿ ಇಲ್ಲ ಎಂದು ಉತ್ತರಿಸಿದ್ದು ಸಾಕ್ಷಿಗೆ ನಿಮ್ಮ ಪ್ರಮಾಣ ಪತ್ರದಲ್ಲಿ ಬರೆಯಿಸಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆಯೇ? ಎಂದು ಪುನಃ ಕೇಳಲಾಗಿ ಸತ್ಯವಾಗಿವೆ ಎಂದು ಉತ್ತರಿಸಿದ್ದಾರೆ. ಪಾಟೀ ಸವಾಲಿನಲ್ಲಿ ಕೇಳಿದ ಯಾವ ಪಾಯಿಂಟ್ ಸರಿ ಇಲ್ಲ ಹೇಳಿ ಎಂದರೆ ಸರ್ವೆ ನಂ.35/1, 36, 60/3 ಮತ್ತು 72/3 ರಲ್ಲಿ ನಮ್ಮ ಭಾಗಕ್ಕೆ ಬಂದ ಆಸ್ತಿಯನ್ನು ನಾವು ಮಾರಾಟ ಮಾಡಿದ್ದೇವೆ. ಅದೇ ರೀತಿ ಪಿಳ್ಳಪ್ಪ ರವರ ಕುಟುಂಬದವರು ಕೂಡ ಸದರಿ ಜಮೀನುಗಳಲ್ಲಿ ಅವರ ಭಾಗಕ್ಕೆ ಬಂದ ಆಸ್ತಿಯನ್ನು ಅವರು ಮಾರಾಟ ಮಾಡಿದ್ದಾರೆ ಮತ್ತು ಈಗ ಈ ನಾಲ್ಕು ಸರ್ವೆ ನಂಬರ್‌ಗಳಲ್ಲಿ ಮಾರಾಟ ಮಾಡಿ ಉಳಿದಿರುವ ಜಮೀನಿನಲ್ಲಿ ನಾವೇ ಸ್ವಾಧೀನ ಹೊಂದಿದ್ದೇವೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂ.5 ರಲ್ಲಿ ದಾವಾ ಸ್ವತ್ತುಗಳ ಬಗ್ಗೆ ನನ್ನ ತಂದೆ ಮತ್ತು ಪ್ರತಿವಾದಿ ನಂ.1 ಮತ್ತು 2 ರವರ ತಂದೆಯ ನಡುವೆ ಬಾಯಿ ಮಾತಿನ ಪಾಲು ವಿಭಾಗವಾಗಿತ್ತು ಎಂದು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ.

5) ನನಗೆ ದಾವಾ ಸ್ವತ್ತಿನ ಚೆಕ್ಕುಬಂದಿ ಹೇಳಲು ಆಗುತ್ತದೆ. ಪೂರ್ವಕ್ಕೆ ನಂಜುಂಡಪ್ಪನವರ ಅಂಜಿನಪ್ಪನ ಜಮೀನು, ಪಶ್ಚಿಮಕ್ಕೆ ಚಿಕ್ಕ ಮುನಿಯಪ್ಪನ ಜಮೀನು, ಉತ್ತರಕ್ಕೆ ಸರ್ಕಾರಿ ಕಾಲುವೆ ಮತ್ತು ದಕ್ಷಿಣಕ್ಕೆ ಕೂಡ ಸರ್ಕಾರಿ ಕಾಲುವೆ ಇರುತ್ತದೆ. ನಾನು ಸರ್ವೆ ನಂ.60/3 ರಲ್ಲಿ ಬೀಟ್‌ರೂಟ್ ಬೆಳೆ ಬೆಳೆಯುತ್ತೇನೆ ಎಂದು ಬರೆಯಿಸಿದ್ದು, ಸದರಿ ಬೆಳೆಯನ್ನು ನಾನು ಮಳೆಯಾಧಾರಿತವಾಗಿ ಬೆಳೆಯುತ್ತಿದ್ದೇನೆಯೋ? ಅಥವಾ ನೀರಾವರಿ ಮಾಡಿಸಿಕೊಂಡಿದ್ದೀನೋ? ಎಂದರೆ ನೀರಾವರಿ ಮಾಡಿಸಿಕೊಂಡಿದ್ದೇನೆ. ನನ್ನ ತಂದೆಯವರೇ ಸದರಿ ಸರ್ವೆ ನಂ.60/3 ರಲ್ಲಿ ಬೋರ್‌ವೆಲ್ ಹಾಕಿಸಿದ್ದರು. ಆ ಬೋರ್‌ವೆಲ್‌ನಲ್ಲಿ ಎಷ್ಟು ಇಂಚು ನೀರು ಬರುತ್ತಿತ್ತು ಎಂದರೆ ಈಗ ಆ ಬೋರ್‌ವೆಲ್‌ನಲ್ಲಿ ನೀರು ಬರುತ್ತಿಲ್ಲ, ನಿಂತುಹೋಗಿದೆ. ಆ ಬೋರ್‌ವೆಲ್ ನಿಂತು ಹೋಗಿ ಆರು ತಿಂಗಳು ಕಳೆದಿದೆ. ನೀರು ಇಲ್ಲವಾದ್ದರಿಂದ ನಾನು ಬೆಳೆ ಬೆಳೆಯಲು ಆಗುತ್ತಿಲ್ಲ ಎಂದರೆ ಬೆಳೆ ಬೆಳೆಯುತ್ತಲೇ ಇದ್ದೇನೆ. ನಾನು ಸರ್ವೆ ನಂ.36 ರಿಂದ ಈ ಜಮೀನಿಗೆ ನೀರು ಹಾಯಿಸಿಕೊಂಡು ಸರ್ವೆ ನಂ.60/3 ಮತ್ತು ಸರ್ವೆ ನಂ.36 ಎರಡರಲ್ಲೂ ಬೆಳೆ ಬೆಳೆಯುತ್ತಿದ್ದೇನೆ. ಸರ್ವೆ ನಂ.36 ಮತ್ತು ಸರ್ವೆ ನಂ.60/3 ರ ನಡುವೆ ಎಷ್ಟು ಕಿ.ಮೀ. ಅಂತರವಿದೆ ಎಂದರೆ ನನ್ನ ತಂದೆ ಸರ್ವೆ ನಂ.36 ರಿಂದ ಸರ್ವೆ ನಂ.60/3 ರಕ್ಕೆ ಮೂರು ರೋಲ್ ಪೈಪು ಹಾಕಿಸಿದ್ದು, ಒಂದು ರೋಲ್ ಪೈಪ್ 325 ಅಡಿ ಇದ್ದು ಮೂರು ರೋಲ್ ಪೈಪ್‌ಗೆ 975 ಅಡಿ ಆಗುತ್ತದೆ. ಆದ್ದರಿಂದ ಈ ಎರಡೂ ಜಮೀನುಗಳ ನಡುವೆ ಅಂತರ 975 ಅಡಿ ಇರುತ್ತದೆ. ಸರ್ವೆ ನಂ.36 ರಲ್ಲಿ ಇರುವ ಬೋರ್‌ನಲ್ಲಿ ಒಂದೂವರೆ ಇಂಚು ನೀರು ಬರುತ್ತದೆ. ಸರ್ವೆ ನಂ.36 ರಲ್ಲಿ ಏನು ಬೆಳೆ ಇದೆ ಎಂದರೆ ಕೋಸು ಮತ್ತು ಸೀಮೆ ಹುಲ್ಲು ಬೆಳೆಯುತ್ತದೆ. ಸರ್ವೆ ನಂ.60-3 ರಲ್ಲಿ ಇರುವ 1 ಎಕರೆ 17 ಗುಂಟೆ ವಿಸ್ತೀರ್ಣದಲ್ಲಿ ಯಾವ ಬೆಳೆ ಎಷ್ಟು ವಿಸ್ತೀರ್ಣದಲ್ಲಿ

ಇಡಲಾಗಿದೆ ಎಂದರೆ ಮುಕ್ಕಾಲು ಎಕರೆಯಲ್ಲಿ ಜೋಳ ಉಳಿಕೆ ಜಮೀನಿನಲ್ಲಿ ಪರಂಗಿ ಹಾಕಿದ್ದೇವೆ. ಸರ್ವೆ ನಂ.36 ರಲ್ಲಿ ಇರುವ ಬೋರ್‌ವೆಲ್ ನೀರು ಆ ಜಮೀನಿಗೂ ಮತ್ತು ಸರ್ವೆ ನಂ.60/3 ಎರಡಕ್ಕೂ ಸರಿ ಹೋಗುತ್ತದೆಯೇ? ಎಂದರೆ ಸ್ವಲ್ಪ ಭಾಗ ಬೋರ್‌ವೆಲ್ ನೀರು ಸ್ವಲ್ಪ ಭಾಗ ಮಳೆ ನೀರಿನ ಆಧಾರದ ಮೇಲೆ ಬೆಳೆ ಬೆಳೆಯುತ್ತೇವೆ. ದಿ.06-04-2020 ರಂದು ಪ್ರತಿವಾದಿಗಳು ಸುಮಾರು 40 ವರ್ಷಗಳಿಂದ ಪ್ರತಿವಾದಿಗಳು ಸ್ವಾಧೀನದಲ್ಲಿರುವ ಸರ್ವೆ ನಂ.60/3 ರಲ್ಲಿ ಒಂದು ಬೋರ್‌ವೆಲ್ ಹಾಕಿಸಿದ್ದರು ಎಂದರೆ ಸುಳ್ಳು. ಅವರು ಬೋರ್‌ವೆಲ್ ಹಾಕಿಸುವಾಗ ನಾನು ಪ್ರತಿವಾದಿಗಳ ಸ್ವಾಧೀನಕ್ಕೆ ತೊಂದರೆ ಕೊಟ್ಟೆ ಎಂದರೆ ಅದೆಲ್ಲಾ ಸುಳ್ಳು. ನಾನು ಸರ್ವೆ ನಂ.60/3 ರಲ್ಲಿ ಪ್ರತಿವಾದಿಗಳು ಬೋರ್‌ವೆಲ್ ಹಾಕಲು ಪ್ರಯತ್ನಿಸಿದ ಬಗ್ಗೆ ವಿಜಯಪುರ ಪೋಲೀಸ್ ಠಾಣೆಗೆ ದೂರು ಕೊಟ್ಟಿದ್ದೆ ಎಂದರೆ ದೂರು ಕೊಟ್ಟಿರುವುದು ನಿಜ. ನಾನು ಹೇಳುತ್ತೇನೆ ಸರ್ವೆ ನಂ.60/3 ರಲ್ಲಿ ನಾವು ಬೆಳೆದ ಜೋಳದ ಬೆಳೆಯನ್ನು ಪ್ರತಿವಾದಿಗಳು ಕಟಾವು ಮಾಡಿದ್ದಾರೆ ಎಂದು ದೂರು ಕೊಟ್ಟಿದ್ದೇನೆ. ಪೋಲೀಸರಿಗೆ ಕೊಟ್ಟ ದೂರಿನಲ್ಲಿ ಜೋಳದ ಬೆಳೆ ಕಟಾವು ಮಾಡಿದ ಬಗ್ಗೆ ಬರೆಯಲಾಗಿದೆಯೇ? ಎಂದರೆ ನನ್ನ ತಂದೆಯೇ ಆ ದೂರು ಕೊಟ್ಟಿರುವುದರಿಂದ ಅದರಲ್ಲಿ ಏನು ಬರೆಯಿಸಿದ್ದರೋ ನನಗೆ ಗೊತ್ತಿಲ್ಲ. ಆ ದೂರಿಗೆ ನನ್ನ ತಂದೆ ಸಹಿ ಮಾಡಿದ್ದರೋ? ಅಥವಾ ನಾನೇ ಸಹಿ ಮಾಡಿದ್ದೇನೋ? ಎಂದರೆ ನನಗೆ ಜ್ಞಾಪಕವಿಲ್ಲ. ನನ್ನ ತಂದೆ ಯಾವಾಗ ಮೃತ ಪಟ್ಟರು ಎಂದರೆ ಆರು ವರ್ಷಗಳ ಹಿಂದೆ ಮೃತ ಪಟ್ಟರು. ಕಳೆದ ವರ್ಷ ಪೋಲೀಸರಿಗೆ ದೂರನ್ನು ನಾನೇ ಕೊಟ್ಟಿದ್ದೆ. ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಪ್ರತಿವಾದಿಗಳ ಸ್ವಾಧೀನಕ್ಕೆ ತೊಂದರೆ ಕೊಡಬೇಡ ಎಂದು ಬುದ್ಧಿ ಮಾತು ಹೇಳಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ.60/3 ರಲ್ಲಿ 1 ಮತ್ತು 2ನೇ ಪ್ರತಿವಾದಿ ದಿ.06-04-2020 ರಂದು ಬೋರ್‌ವೆಲ್ ಹಾಕಿಸಿದರು ಎಂದರೆ

ಸರಿಯಲ್ಲ. ಅವರು 1400 ಅಡಿ ಬೋರ್‌ವೆಲ್ ಕೊರೆಯಿಸಿದ್ದು ಅದರಲ್ಲಿ ಎರಡೂವರೆ ಇಂಚು ನೀರು ಬಂದಿದೆ ಎಂದರೆ ಬೇರೆ ಯಾವುದೋ ಬೋರ್‌ವೆಲ್‌ನ ಮಾಹಿತಿ ತಂದು ಹೇಳುತ್ತಿದ್ದೀರಿ. ಪ್ರತಿವಾದಿಗಳು ಬೋರ್‌ವೆಲ್ ಕೊರೆಯಿಸಿ ಸರ್ವೆ ನಂ.60/3 ರಲ್ಲಿ ಮುಕ್ಕಾಲು ಎಕರೆಯಲ್ಲಿ ಜೋಳ ಮತ್ತು ಉಳಿದ ಜಮೀನಿನಲ್ಲಿ ಪರಂಗಿ ಬೆಳೆ ಇಟ್ಟಿದ್ದಾರೆ ಎಂದರೆ ಅದನ್ನು ನಾನೇ ಬೆಳೆದಿದ್ದೇನೆ. ಪ್ರತಿವಾದಿಗಳು 1973 ರಿಂದ ಈಚೆಗೆ ಒಟ್ಟು ಮೂರು ಬೋರ್‌ವೆಲ್‌ಗಳನ್ನು ಸರ್ವೆ ನಂ.60/3 ರಲ್ಲಿ ಕೊರೆಯಿಸಿದ್ದು ಆ ಮೂರೂ ಬೋರ್‌ವೆಲ್‌ಗಳಲ್ಲೂ ನೀರು ಬಿದ್ದಿದೆ ಎಂದರೆ ಸುಳ್ಳು. ಪ್ರತಿವಾದಿಗಳು 1973 ರಿಂದ ಈ ದಿನಾಂಕದವರೆಗೂ ಸರ್ವೆ ನಂ.60/3 ರಲ್ಲಿ ವಿವಿಧ ಬೆಳೆಗಳನ್ನು ಬೆಳೆಯುತ್ತಾ ಸ್ವಾಧೀನ ಹೊಂದಿದ್ದಾರೆ ಎಂದರೆ ಸುಳ್ಳು. ಸಾಕ್ಷಿಗೆ ಕಲರ್ ಫೋಟೋಗಳನ್ನು ತೋರಿಸಿ ಈ ಫೋಟೋಗಳಲ್ಲಿ ಪ್ರತಿವಾದಿಗಳು ಸರ್ವೆ ನಂ.60/3 ರಲ್ಲಿ ಕಟ್ಟಿಸಿದ ಪಂಪ್ ಹೌಸ್ ಮತ್ತು 25ಕೆವಿ ಟ್ರಾನ್ಸ್‌ಫಾರ್ಮರ್ ಹಾಕಿಸಿರುವುದು ಕಾಣುತ್ತದೆ ಎಂದು ಸೂಚಿಸಿದರೆ ಸಾಕ್ಷಿಯು ಸುಳ್ಳು ಎಂದು ನಿರಾಕರಿಸಿದ್ದಾರೆ. ಸಾಕ್ಷಿಗೆ ಒಂದು ಫೋಟೋ ತೋರಿಸಿ ಇದರಲ್ಲಿ ಇರುವ ವ್ಯಕ್ತಿ ಯಾರು ಎಂದು ಕೇಳಿದ್ದು, ಸಾಕ್ಷಿಯು 1ನೇ ಪ್ರತಿವಾದಿ ನಾರಾಯಣಸ್ವಾಮಿ ಎಂದಿದ್ದರಿಂದ ಫೋಟೋವನ್ನು **ನಿ.ಡಿ.1** ಎಂದು ಗುರುತಿಸಿತು. ಸದರಿ ಫೋಟೋದಲ್ಲಿ 1ನೇ ಪ್ರತಿವಾದಿ ಸರ್ವೆ ನಂ.60/3 ರಲ್ಲಿ ಬೆಳೆ ಇಟ್ಟಿರುವುದು ಕಾಣುತ್ತದೆ ಎಂದರೆ ರಾತ್ರಿ ವೇಳೆ ಫೋಟೋ ತೆಗೆಸಿಕೊಂಡಿದ್ದಾರೆ. ಇನ್ನೂ ಎರಡು ಫೋಟೋಗಳಲ್ಲಿ ಇರುವ ವ್ಯಕ್ತಿ 1ನೇ ಪ್ರತಿವಾದಿ ನಾರಾಯಣಸ್ವಾಮಿ ಎಂದು ಗುರುತಿಸಿದ್ದರಿಂದ ಅವುಗಳನ್ನು **ನಿ.ಡಿ.2 ಮತ್ತು ನಿ.ಡಿ.3** ಎಂದು ಗುರುತಿಸಿತು. ಸರ್ವೆ ನಂ.60/3 ರಲ್ಲಿ ಇರುವ ಬೋರ್‌ವೆಲ್, ಪಂಪ್‌ಹೌಸ್ ಮತ್ತು ಟ್ರಾನ್ಸ್‌ಫಾರ್ಮರ್ ಇವುಗಳನ್ನು ಪ್ರತಿವಾದಿಗಳೇ ಹಾಕಿಸಿದ್ದಾರೆ ಎಂದರೆ ಸುಳ್ಳು. ವಾದ ಪತ್ರದಲ್ಲಿ ಪಿಳ್ಳಪ್ಪನ ಮಗ ಬಸವರಾಜು ಎಂದು ಬರೆಯಿಸಿದ್ದು,

ಸದರಿ ಬಸವರಾಜು ಯಾರು ಎಂದರೆ 1ನೇ ಪ್ರತಿವಾದಿ ನಾರಾಯಣಸ್ವಾಮಿಯ ಮಗ. 2ನೇ ಪ್ರತಿವಾದಿ ಬಸವರಾಜು 1ನೇ ಪ್ರತಿವಾದಿ ನಾರಾಯಣಸ್ವಾಮಿಯ ಮಗನಾದರೂ ನಾನು ವಾದ ಪತ್ರದಲ್ಲಿ ಪಿಳ್ಳಪ್ಪನ ಮಗನೆಂದು ಬರೆಯಿಸಿ ತಪ್ಪು ಮಾಹಿತಿ ನೀಡಿದ್ದೇನೆ ಎಂದರೆ ಅದು ವಕೀಲರ ಕಛೇರಿಯಲ್ಲಿ ಆಗಿರುವ ತಪ್ಪು ಇರುತ್ತದೆ. ನಾನು 2007 ರಲ್ಲಿ ದಾವೆ ಹಾಕಿ 2021 ರ ವರೆಗೂ ಆ ತಪ್ಪನ್ನು ನಮ್ಮ ವಕೀಲರಿಗೆ ತಿಳಿಸಿಲ್ಲವೇ? ಎಂದರೆ ನಾನು ಓದಿಲ್ಲವಾದ್ದರಿಂದ ನನಗೆ ಆ ಬಗ್ಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ತಯಾರಿಸುವಾಗಲೂ ನಾನು ನನ್ನ ವಕೀಲರಿಗೆ ತಿಳಿಸಲಿಲ್ಲವೇ? ಎಂದರೆ ದಾವೆ ಹಾಕಲು ನನ್ನ ತಂದೆಯೇ ಮಾಹಿತಿ ಕೊಟ್ಟಿದ್ದರು, ನಾನು ಓದಿಲ್ಲವಾದ್ದರಿಂದ ನನಗೆ ಅದರ ಬಗ್ಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ, ನಿರಾಕರಿಸಿ ಪಾಟೀ ಸವಾಲು ಮುಗಿದಿದೆ ಎಂದು ಪರಿಗಣಿಸಲಾಯಿತು).

ಮರು ವಿಚಾರಣೆ – ಇಲ್ಲಾ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ.**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**